ಅಬಕಾರಿ ಗುತ್ತಿಗೆಯಿಂದ ಬಂದ ಆದಾಯ.

1667. ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ (ಕುಂದಾಪುರ) : ಮಾನ್ಯ ಗೃಹ ಮತ್ತು ಅಬಕಾರಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಸರ್ಕಾರಕ್ಕೆ ಅಬಕಾರಿ ಗುತ್ತಿಗೆಯಿಂದ 1989-90 ಮತ್ತು 1990-91ನೇ ಸಾಲುಗಳಲ್ಲಿ ಬಂದ ಆದಾಯವೆಷ್ಟು? (ವರ್ಷವಾರು ವಿವರ ನೀಡುವುದು)

ಶ್ರೀ ಧರ್ಮ ಸಿಂಗ್ (ಗೃಹ ಮತ್ತು ಅಬಕಾರಿ ಸಚಿವರು) :

ಅ)

ವರ್ಷ	ಸರ್ಕಾರಕ್ಕೆ ಬಂದ ಆದಾಯ
1989-90	208.72 ಕೋಟಿ ರೂ.ಗಳು
1990-91	278.84 ಕೋಟಿ ರೂ.ಗಳು
ಒಟ್ಟು	487.56 ಕೋಟಿ ರೂ.ಗಳು

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯ ಕುರಿತು

1716. ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್) : ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಜನವರಿ 1991 ರಿಂದ ಡಿಸೆಂಬರ್ 1991ರ ಅಂತ್ಯದ ವರೆಗೆ ತೆಗೆದುಕೊಂಡ ಕಾರ್ಯಕ್ರಮಗಳ ವಿವರಗಳನ್ನು ಕೊಡುವುದು (ತಾಲ್ಲೂಕ್‌ವಾರು ವಿವರಗಳನ್ನು ಒದಗಿಸುವುದು).

ಆ) ಈ ಅವಧಿಯಲ್ಲಿ ಖರ್ಚು ಮಾಡಿದ ಹಣವೆಷ್ಟು? (ತಾಲ್ಲೂಕುವಾರು ಮಾಹಿತಿ ಒದಗಿಸುವುದು)

ಇ) 1992-93ನೇ ಸಾಲಿಗೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ತೆಗೆದುಕೊಳ್ಳಲು ಉದ್ದೇಶಿಸಿದ ಕಾರ್ಯಕ್ರಮಗಳಾವುವು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಸಚಿವರು) :

ಅ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆಯಡಿಯಲ್ಲಿ ವಲಯವಾರು ತೆಗೆದುಕೊಂಡ ಕಾಮಗಾರಿಗಳ ಸಂಖ್ಯೆ ಮತ್ತು 1-1-1991 ರಿಂದ 12-12-1991 ರವರೆಗೆ ಖರ್ಚು ಮಾಡಿದ ಹಣದ ವಿವರಗಳು ಕೆಳಗಿನಂತಿವೆ. ತಾಲ್ಲೂಕ್‌ವಾರು ವಿವರಗಳು ತತ್‌ಕ್ಷಣ ಲಭ್ಯವಿರುವುದಿಲ್ಲ.

	ಪಲಯ-ತೆಗೆದುಕೊಂಡ ಕಾಮಗಾರಿಗಳು		ವಿರ್ಚು (ಲಕ್ಷ ರೂ.ಗಳಲ್ಲಿ)
1.	ರಸ್ತೆ ಮತ್ತು ಸೇತುವೆಗಳು	13	181.82
2.	ದೊಡ್ಡ ಮತ್ತು ಸಾಧಾರಣ ನೀರಾವರಿ	2	271.15
3.	ಸಣ್ಣ ನೀರಾವರಿ	2	7.68
4.	ಶಿಕ್ಷಣ	198	172.26
5.	ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್	175	245.00
6.	ಕರ್ನಾಟಕ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ	2	57.14
7.	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	4	101.31
8.	ಸಹಕಾರ	1	910.00
9.	ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ	43	192.35

ಆ) ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯು 10-3-1992 ರಿಂದ ಅಸ್ತಿತ್ವಕ್ಕೆ ಬಂದಿದ್ದು. ಈ ಮಂಡಳಿಯು 1992-93ನೇ ಸಾಲಿಗೆ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆಯನ್ನು ತಯಾರಿಸುವುದು.

ನಿಲುವಳಿ ಸೂಚನೆ ಪ್ರಸ್ತಾಪ

ಮೈಷುಗರ್ ಕಂಪನಿಯವರು ರೈತರಿಂದ ಕಬ್ಬನ್ನು ತೆಗೆದುಕೊಳ್ಳದೇ ಇರುವುದು.

† ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ. ಮಂಡ್ಯ ಜಿಲ್ಲೆಯಲ್ಲಿ ಕಬ್ಬನ್ನು ಬೆಳೆದಂತಹ ರೈತರು. ಕಬ್ಬನ್ನು ತೆಗೆದುಕೊಳ್ಳುತ್ತೇವೆಂದು ದೇಳಿದ್ದ ಸರ್ಕಾರದ ಕಂಪನಿ ಮೈಷುಗರ್ ಕಂಪನಿ ಕಬ್ಬನ್ನು ತೆಗೆದುಕೊಳ್ಳದೆ ರೈತರು ಕಂಗಾಲಾಗಿರತಕ್ಕ ವಿಚಾರದಲ್ಲಿ ನಾನು ನಿಲುವಳಿ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೇನೆ.

ಛೇರ್‌ಮನ್ : ಈಗ ಸಭೆಯಲ್ಲಿ ಭಾರೀ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಇಲ್ಲ. ಅವರು ಬಂದಮೇಲೆ ತೆಗೆದುಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇಲ್ಲಿ ಬಹಳ ಪ್ರಾಮುಖ್ಯವಾಗಿ 50-60 ಕೋಟಿ ರೂಪಾಯಿಗಳಷ್ಟು ಕಬ್ಬು ಬೆಳೆದು ನಿಂತಿದೆ. ತಾವು ಹೇಳಿದ ಹಾಗೆ ಭಾರಿ ಕೈಗಾರಿಕೆಗಳ ಸಚಿವರು ಬಂದ ನಂತರ ಉತ್ತರ ಪಡೆಯುವುದಕ್ಕೆ ನಾವು ರೆಡಿ ಇದ್ದೇವೆ. ಆದಕ್ಕೆ ಏನೂ ತೊಡ್ಡಿಯಿಲ್ಲ. ಇರಿಗೇಷನ್ ಡಿಪಾರ್ಟ್‌ಮೆಂಟ್‌ನವರು ಏನು ನೀರು ಬಿಡುತ್ತಿದ್ದಾರು. ಆದನ್ನು ಈಗ ನ್ಯಾಪ್ ಮಾಡಿದ್ದಾರೆ. ಕಬ್ಬು ಒಣಗಿಹೋಗುತ್ತಿದೆ. ಸಕ್ಕರೆ ಕಂಪನಿಯವರು ಕಬ್ಬನ್ನು ತೆಗೆದುಕೊಳ್ಳುತ್ತಿಲ್ಲ. ಏನಾದರೂ ಮುಂದುಕಡೆ ಸಣ್ಣ ಬೆಂಕಿ ಅನಾಹುತ ಆದರೆ. ನಾಗರಹೊಳೆಯಲ್ಲಿ ಏನು ಆಯಿತು. ಅದೇ ಅನಾಹುತವನ್ನು ನಾವು